7. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, (ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಮಂತ್ರಿಯವರ ಪರವಾಗಿ)

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ;

1989-90ನೇ ಸಾಲಿನ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 30ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

8. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, (ಮಾನ್ಯ ಪಶುಸಂಗೋಪನೆ ರಾಜ್ಯ ಮಂತ್ರಿಯವರ ಪರವಾಗಿ)

ಅ) 1973ನೇ ಇಸವಿ ಕರ್ನಾಟಕ ಕುರಿ ಮತ್ತು ಕುರಿ ಉತ್ಪಾದನಾ ಅಭಿವೃದ್ಧಿ ಅಧಿನಿಯಮದ 24ನೇ ಕಲಮಿನ ಮೇರೆಗೆ;

1990-91ನೇ ಸಾಲಿನ ಕರ್ನಾಟಕ ಕುರಿ ಮತ್ತು ಕುರಿ ಉತ್ಪಾದನಾ ಅಭಿವೃದ್ಧಿ ಮಂಡಳಿಯ ವಾರ್ಷಿಕ ವರದಿ; ಹಾಗೂ

ಅ) 1956ನೇ ಇಸವಿ ಕಂಪನಿಗಳ ಅಧಿನಿಯಮದ 619(ಎ) ಕಲಮಿನ ಮೇರೆಗೆ;

1987-88ನೇ ಸಾಲಿನ ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತದ 10ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

9. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, (ಮಾನ್ಯ ಇಂಧನ ರಾಜ್ಯ ಮಂತ್ರಿಯವರ ಪರವಾಗಿ)

1948ನೇ ಇಸವಿ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ 61(3) ನೇ ಕಲಮಿನ ಮೇರೆಗೆ;

1991-92ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ವಿತ್ತೀಯ ತಃಖ್ತೆ ಹಾಗೂ 1990-91ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಪರಿಷ್ಕೃತ ಆರ್ಥಿಕ ವಿತ್ತೀಯ ತಃಖ್ತೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು : ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ, ರಾಷ್ಟ್ರಪತಿಯವರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯು ಮುಂದಿಡುತ್ತೇನೆ.

STATEMENT SHOWING THE BILLS ASSENTED BY THE GOVERNOR OR PRESIDENT.

Sl. No	*Name of the Bill*	*Date of Assent*	*Assented by*
1	2	3	4
1.	The Karnataka Scheduled Castes, Scheduled Tribes and other Backward Classes (Reservation of Appointments etc) Bill, 1990.	04.3.1991	Governor
2.	The Karnataka Appropriation Bill, 1991.	27.3.1991	"
3.	The Karnataka Appropriation (Vote on Account) Bill, 1991.	27.3.1991	"
4.	The Karnataka Stamp (Amendment) Bill, 1991.	30.3.1991	"
5.	The Karnataka Sales Tax (Amendment) Bill, 1991.	30.3.1991	"
6.	The Karnataka Motor Vehicles Taxation (Amendment) Bill, 1991.	30.3.1991	"
7.	The Karnataka Agricultural Produce Marketing (Regulation) and Certain other laws (Amendment) Bill,1991.	08.4.1991	"
8.	The Karnataka Town and Country Planning (Amendment) Bill, 1991	16.4.1991	"
9.	The Karnataka Municipal Corporation (Amendment) Bill, 1990	19.4.1991	Governor
10.	The Karnataka Land Revenue (Amendment) Bill, 1991	19.4.1991	"
11.	The Bangalore Development Authority (Amendment) Bill, 1991	19.4.1991	"
12.	The Karnataka Legislative (Prevention of disqualification) (Amendment) Bill,1991	19.04.1991	"
13.	The Karnataka Local Authorities (Amendment) Bill, 1991	26.04.1991	"
14.	The Kannada Universities Bill, 1991	18.05.1991	"
15.	The Karnataka Contract Carriages (Acquistion) (Amendment) Bill, 1990	22.08..1991	President
16.	The Karnataka Cauvery Basin Irrigation Protection Bill, 1991	12.10.1991	Governor.

ಶ್ರೀ ವಾಟಾಳ್ ನಾಗಾರಜ್ : ಮಾನ್ಯ ಅಧ್ಯಕ್ಷರಲ್ಲಿ ಒಂದು ಮನವಿ. ಕಾವೇರಿಗಾಗಿ ಸೀಮಿತವಾದ ಸಭೆ ಇದು. ಈ ಸಭೆ ಕಾವೇರಿಗಾಗಿಯೇ ಕರೆದಿರತಕ್ಕಂಥ ಸಭೆ. ಬೇರೆ ಯಾವುದೇ ವ್ಯವಹಾರವನ್ನು ನಡೆಸದೇ ಬರೀ ಕಾವೇರಿಯ ಬಗ್ಗೆ ನಾವು ಚರ್ಚೆಯನ್ನು ನಡೆಸಬೇಕಾಗಿದೆ.

ಅಧ್ಯಕ್ಷರು : ಚರ್ಚೆ ಏನೂ ಇಲ್ಲ.

ತಮಿಳುನಾಡು ಮತ್ತು ಕರ್ನಾಟಕ ಹಾಗೂ ಇತರೆ ರಾಜ್ಯಗಳ ನಡುವೆ ಉಂಟಾಗಿರುವ ಕಾವೇರಿ ಜಲ ವಿವಾದದ ಬಗ್ಗೆ ಪ್ರಸ್ತಾವನೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಒಂದು ರೀತಿಯ ಉದ್ಭವವಾಗಿರತಕ್ಕಂಥ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಾವು ಸರ್ಕಾರದವರು ಈ ಸದನವನ್ನು ಕರೆಯತಕ್ಕಂಥ ತೀರ್ಮಾನವನ್ನು ಮಾಡಿದ್ದೇವೆ. ನಮಗೆಲ್ಲಾ ಗೊತ್ತಿರುವ ಹಾಗೆ, ಇವತ್ತು ನಾನು ಕಾವೇರಿ ಜಲ ವಿವಾದದ ವಿಷಯದಲ್ಲಿ ಸಂಪೂರ್ಣ ಹಿನ್ನೆಲೆಗೆ ಹೋಗತಕ್ಕಂಥ, ವಿವರಗಳಿಗೆ ಹೋಗತಕ್ಕಂಥ ಅವಶ್ಯಕತೆ ಇದೆ ಎಂದು ನಾನು ಭಾವಿಸುವುದಿಲ್ಲ. ಅಂದರೆ 19ನೇ ಶತಮಾನದಿಂದ ಹಿಡಿದು ಮಾತನಾಡುತಕ್ಕಂಥ ಅವಶ್ಯಕತೆ ಇದೆ ಎಂದು ನಾನು ಭಾವಿಸುವುದಿಲ್ಲ. ವಿವರಗಳು ಹಲವಾರು ಬಾರಿ ಅಚ್ಚಾಗಿರತಕ್ಕಂಥ ಪ್ರತಿಗಳನ್ನು ನಾವು ಕಂಡಿದ್ದೇವೆ. ಈ ಸದನದಲ್ಲಿ ನಮ್ಮ ಹಿಂದೆ ಇದ್ದಂಥ ಪೂರ್ವ ಸರ್ಕಾರಗಳು ಹಲವಾರು ರಾಜಕೀಯ ಪಕ್ಷಗಳು ಸೇರಿರತಕ್ಕಂಥ ಸರ್ಕಾರಗಳು ಬಂದಂಥ ಕಾಲದಲ್ಲಿ ನಾವು ಇಲ್ಲಿ ಕುಳಿತಾಗ, ಅಲ್ಲಿ ಕುಳಿತಿದಾಗ ನಾವೆಲ್ಲಾ ಮಾತನಾಡಿರತಕ್ಕಂಥ ವಿಷಯ ಇದು. ನಾವು ಮೊದಲಿನಿಂದಲೂ ಒಂದು ಮಾತನ್ನು ಸ್ಪಷ್ಟಪಡುತ್ತಾ ಬಂದಿದ್ದೇವೆ. ಈ ಒಂದು ನದಿ ಹುಟ್ಟಬೇಕಾದರೆ ಎಲ್ಲೊ ಒಂದು ಕಡೆ ಹುಟ್ಟುತ್ತದೆ, ಮತ್ತೊಂದು ಕಡೆಗೆ ಹರಿಯಬೇಕಾಗುತ್ತದೆ. ಮೇಲ್‌ಭಾಗದಲ್ಲಿ ಹುಟ್ಟಿರತಕ್ಕಂಥ ನದಿ ಕೆಳಭಾಗದಲ್ಲಿ ಹರಿದು ಹೋಗತಕ್ಕಂಥದ್ದು ನಿಸರ್ಗದ ನಿಯಮ. ಅದು ನಮ್ಮದಲ್ಲ, ಮತ್ತೊಬ್ಬರದೂ ಕೂಡ ಅಲ್ಲ. ಈ ಒಂದು ನಿಯಮದ ಹಿನ್ನೆಲೆಯಲ್ಲಿ ಸಹಜವಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಹರಿದು ಹೋಗತಕ್ಕಂಥ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಕೆಲವೊಮ್ಮೆ ವಿವಾದವಾಗಿ ಪರಿಣಾಮ ಹೊಂದಿರತಕ್ಕಂಥದ್ದನ್ನು ನಾವು ಕಾಣುತ್ತೇವೆ. ನಮ್ಮ ದೇಶ ಬಂಗ್ಲಾದೇಶ ಇರಬಹುದು, ನಮ್ಮ ರಾಜ್ಯಕ್ಕೆ ಪಕ್ಕದ ರಾಜ್ಯ ಇರಬಹುದು, ಅಥವಾ ನಮ್ಮ ರಾಜ್ಯ ಆಂಧ್ರಪ್ರದೇಶ ಇರಬಹುದು. ತೆಲಗು ಗಂಗಾ ಇತ್ಯಾದಿ ಇರಬಹುದು, ಯಾವುದೇ ವಿಚಾರ ಇದ್ದರೂ ಕೂಡ ಒಂದು ನೀತಿಯನ್ನು ನಾವು ಅನುಸರಿಸಿಕೊಂಡು ಹೋಗಬೇಕೆನ್ನತಕ್ಕ ವಿಚಾರದಲ್ಲಿ ನಾವು ಮೂಲಭೂತವಾಗಿ ಒಪ್ಪಿಕೊಂಡು ಬಂದಿದ್ದೇವೆ. ಅದು ಪ್ರೀತಿ ವಿಶ್ವಾಸದಿಂದ ರಾಜ್ಯ ರಾಜ್ಯದ ಬಗ್ಗೆ ಅಥವಾ ನಮ್ಮ ರಾಷ್ಟ್ರದ ಬಗ್ಗೆ ಮಾತನಾಡುವುದು ಅಷ್ಟೇ ಅಲ್ಲ, ರಾಷ್ಟ್ರ ರಾಷ್ಟ್ರದ ಬಗ್ಗೆ ನಾವು ಮಾತುಕತೆಯನ್ನು ಮಾಡುತ್ತೇವೆ. ಅದೇ ರೀತಿಯಾಗಿ ರಾಜ್ಯ ರಾಜ್ಯದವರೂ ಕೂಡ ನಾವು ಮಾತುಕತೆಯ ಮುಖಾಂತರ ಶಾಂತಯುತವಾಗಿ ಸಮಸ್ಯೆಯು ಆ ರೀತಿಯಾಗಿ ಉದ್ಭವವಾಗಿ ಬಂದಾಗ ಅದನ್ನು ಉಭಯತ್ರರೂ ಕೂಡ ಸೇರಿ ನಾವು ಚರ್ಚೆಯ ಮುಖಾಂತರ ಸಮಸ್ಯೆಯನ್ನು ಬಗೆಹರಿಸಿಕೊಳ್ಳತಕ್ಕ ಒಂದು ಪ್ರಜಾಸತ್ತೆಯ ನಿಯಮದ ಒಳಗಡೆ ನಾವು ಅನುಸರಿಸಿಕೊಂಡು ಬಂದಿದ್ದೇವೆ. ನಮ್ಮ ಹಿಂದೆ ಇದ್ದ ಎಲ್ಲಾ ಸರ್ಕಾರಗಳು ಕೂಡ, ಮುಖಂಡರುಗಳು ಕೂಡ, ಮುಖ್ಯಮಂತ್ರಿಗಳು ಕೂಡ, ಎರಡೂ ಸದನಗಳ ಸದಸ್ಯರುಗಳು, ಅನೇಕ